ಇವರುಗಳು ಏನಾಗಿದ್ದಾರೆಂದರೆ ನಮ್ಮಲ್ಲಿ 'ಹಳೆಯ ರೋಗಿಗಳಿಗೆ ಹೊಸ ಡಾಕ್ಟರ್' ಎನ್ನುತಕ್ಕ ರೀತಿಯಾಗಿದೆ. ಅಲ್ಲಿ ಬಹಳಷ್ಟು ಜನರು ಇರುವುದರಿಂದ ಅಲ್ಲಿರತಕ್ಕ ಡಾಕ್ಟರ್‌ಗಳನ್ನೂ ಕೂಡ ದಾರಿ ತಪ್ಪಿಸತಕ್ಕ ಹಲವಾರು ಸಂದರ್ಭಗಳನ್ನು ನಾವು ನೋಡಿದ್ದೇವೆ. ಆ ಕಾರಣಕ್ಕಾಗಿ ನಮ್ಮ ಜಿಲ್ಲಾ ಆಸ್ಪತ್ರೆಯ ಸಲಹಾ ಸಮಿತಿಯಲ್ಲೂ ಕೂಡ ಅಂಥವರನ್ನು ಕರೆಸಿ ಸಲಹೆ ಸೂಚನೆಗಳನ್ನು ಕೊಟ್ಟರೂ ಕೂಡ ಅವರ ಸ್ವಭಾವವನ್ನು ಇಲ್ಲಿಯವರೆಗೂ ಅವರುಗಳು ತಿದ್ದಿಕೊಂಡಿಲ್ಲ. ಆ ಕಾರಣಕ್ಕಾಗಿ ಯಾರ್ಯಾರು ಐದು ವರ್ಷದ ಮೇಲ್ಪಟ್ಟು ಇದ್ದಾರೆ, ಇಂಥವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ತಮ್ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲೂ ಕೂಡ ಸಾಕಷ್ಟು.....

ಅಧ್ಯಕ್ಷರು:– ಜಿಲ್ಲಾ ಆಸ್ಪತ್ರೆ ಬಗ್ಗೆ ತಾವು ಕೇಳಿರುವುದು. ಗ್ರಾಮಾಂತರ ಪ್ರದೇಶದ್ದು ಕೇಳಿದರೆ ಉತ್ತರ ಎಲ್ಲಿದೆ? ಜಿಲ್ಲಾ ಆಸ್ಪತ್ರೆ ಬಗ್ಗೆ ದಯವಿಟ್ಟು ಪ್ರಶ್ನೆ ಕೇಳಿ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ:– ಅದರ ಬಗ್ಗೆ ಕೂಡ ಕೇಳುವುದಕ್ಕೆ ಒಂದು ಅವಕಾಶವನ್ನು ಕೊಡಿ.

ಅಧ್ಯಕ್ಷರು:– ಅವರು ಉತ್ತರ ರೆಡಿಮಾಡಬೇಕಾಗುತ್ತದೆ. ನೀವು ಮೊದಲೇ ಕೇಳಿಬಿಡಬೇಕಾಗಿತ್ತು. ಮೊದಲೇ ಪ್ರಶ್ನೆ ಕಳುಹಿಸುವಾಗಲೇ ಕೇಳಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ:– ಮಾನ್ಯ ಅಧ್ಯಕ್ಷರೇ, ಅವರು ಕೇಳುವ ಪ್ರಶ್ನೆಯೇ ಬೇರೆ. ಉಪ ಪ್ರಶ್ನೆ ಕೇಳುವುದೇ ಬೇರೆ. ಆದರೂ ಕೂಡ ಅವರು ಕೇಳಿರುವುದಕ್ಕೆ ಬರೆದು ಕಳುಹಿಸಿ ಎಲ್ಲಿ ಅಂಥದ್ದು ಇದೆ, ಸರಿಪಡಿಸೋಣ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ:– ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಎಎನ್‌ಎಂ ಗಳ ಕೊರತೆ ಇದೆ. ಅದರ ಜೊತೆಗೆ ಕ್ವಾರ್ಟರ್ಸ್ ಇಲ್ಲ ಎಂಬ ಕಾರಣ ಹೇಳಿ ಸಾಕಷ್ಟು ಎಎನ್‌ಎಂ ಗಳು ಪಟ್ಟಣದಲ್ಲಿರುತ್ತಾರೆ. ಆ ಕ್ವಾರ್ಟರ್ಸ್‌ಗಳನ್ನು ಕೊಡುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

ಅಧ್ಯಕ್ಷರು:– ಕ್ವಾರ್ಟರ್ಸ್ ಬಗ್ಗೆ ಅವರಿಗೆ ಉತ್ತರ ತಿಳಿದಿರುವುದೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಮಾನ್ಯ ಅಧ್ಯಕ್ಷರೇ, ಎಲ್ಲಿ ಸರ್ಕಾರದ ಕ್ವಾರ್ಟರ್ಸ್ ಇದೆ, ಅವರು ಅಲ್ಲಿ ಖಾಯಂ ಆಗಿ ಇರಲೇಬೇಕು. ಕ್ವಾರ್ಟರ್ಸ್ ಕಟ್ಟುವಂತಹ ವಿಚಾರ ಜಿಲ್ಲಾ ಪಂಚಾಯಿತಿಯವರು ಅದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅದರ ಜೊತೆಗೆ ಇತ್ತೀಚೆಗೆ ಒಂದು ಹೆಚ್‌ಎನ್‌ಪಿ ಕಾರ್ಯಕ್ರಮ ಎಂದು ಹೇಳಿ ವಿಶ್ವಬ್ಯಾಂಕ್‌ನಿಂದ ಕೇಳಿದ್ದಾರೆ. ಅದರಲ್ಲಿ ಈ ಎಎನ್‌ಎಂ ಕ್ವಾರ್ಟರ್ಸ್‌ಗಳನ್ನು ಕಟ್ಟುವುದಕ್ಕೆ ಪ್ರಾವಿಷನನ್ನು ಮಾಡಿಕೊಂಡಿದ್ದೇವೆ. ಅವರು ಹೇಳುವಂಥ ಸಮಸ್ಯೆಗಳನ್ನು ಅದರಲ್ಲಿ ಅಳವಡಿಸುತ್ತೇವೆ.

ಕೊಡಗು ಜಿಲ್ಲೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾದ ಹಣ

338(2888): ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ 2000–2001, 2001–2002 ಮತ್ತು 2002–2003ರ ಹಣಕಾಸು ಸಾಲಿನಲ್ಲಿ ಎಷ್ಟು ಹಣ ಮೀಸಲಿಡಲಾಗಿತ್ತು;

ಆ) ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಜಿಲ್ಲಾ ಪಂಚಾಯ್ತಿವಾರು, ತಾಲ್ಲೂಕು ಪಂಚಾಯ್ತಿವಾರು ವಿವರ ನೀಡುವುದು?

ಶ್ರೀ ಎಂ.ವೈ. ಥೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಅ) ಕೊಡಗು ಜಿಲ್ಲೆಗೆ (ಜಿಲ್ಲಾ ವಲಯದಡಿ) 2000–2001, 2001–2002 ಮತ್ತು 2002–2003ರ ಹಣಕಾಸು ಸಾಲಿನಲ್ಲಿ ಮೀಸಲಿಟ್ಟಿದ್ದ ಹಣದ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ವರ್ಷ	ಮೀಸಲಿಟ್ಟಿದ ಹಣ
2000–2001	7226.91
2001–2002	7660.75
2002–2003	6847.90

ಆ) ಬಿಡುಗಡೆ ಮಾಡಲಾದ (ಗ್ರಾಮ ಪಂಚಾಯತ್‌ಗಳ ಪಾಲು ಸೇರಿ) ಹಣದ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ವರ್ಷ	ಬಿಡುಗಡೆ ಮಾಡಲಾದ ಹಣ
2000–2001	6721.72
2001–2002	7101.36
2002–2003	6508.52

ಇ) ಜಿಲ್ಲಾ ಪಂಚಾಯ್ತಿವಾರು, ತಾಲ್ಲೂಕು ಪಂಚಾಯ್ತಿವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

2000–2001, 2001–2002 ಮತ್ತು 2002–2003ರ ಹಣಕಾಸು ಸಾಲಿನಲ್ಲಿ ಕೊಡಗು ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿರುವ ಹಣದ ವಿವರಗಳ ಪಟ್ಟಿ

(ರೂ. ಲಕ್ಷಗಳಲ್ಲಿ)

ವರ್ಷ	ಜಿ.ಪಂ. ಗೆ ಬಿಡುಗಡೆ ಮಾಡಿದ ಹಣ	ತಾ.ಪಂ. ಗೆ ಬಿಡುಗಡೆ ಮಾಡಿದ ಹಣ			
		ಮಡಿಕೇರಿ	ಸೋಮವಾರ ಪೇಟೆ	ವೀರಾಜಪೇಟೆ	ಒಟ್ಟು
2000–01	3165.04	971.20	1233.55	1185.62	6555.41
2001–02	3339.67	950.72	1198.57	1054.31	6543.27
2002–03	3025.62	855.39	1052.04	1015.83	5948.88

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಕಳೆದ ಮೂರು ವರ್ಷದಿಂದ ಬಜೆಟ್‌ನಲ್ಲಿ ಇಟ್ಟಂಥ ಹಣಕ್ಕಿಂತ ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ನನ್ನ ಪ್ರಶ್ನೆ ಇಷ್ಟೇ. 2001ನೇ ಇಸವಿಯಲ್ಲಿ 5 ಕೋಟಿ 5 ಲಕ್ಷ 19 ಸಾವಿರ

ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. 2002ನೇ ಇಸವಿಯಲ್ಲಿ ಸುಮಾರು 5 ಕೋಟಿ 59 ಲಕ್ಷ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಅದೇ ರೀತಿ 2002–03ಕ್ಕೆ ಸುಮಾರು 3 ಕೋಟಿ 29 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದೆ. ಈ ರೀತಿ ಕಡಿಮೆಯಾಗಲಿಕ್ಕೆ ಕಾರಣವೇನು? ಮತ್ತೆ ಈ ವರ್ಷ 2003–04ಕ್ಕೆ ಎಷ್ಟು ಹಣವನ್ನು ಮುಡಿಪಾಗಿಟ್ಟಿದ್ದೀರಿ? ಅದರಲ್ಲಿ ನಾನ್ ಪ್ಲಾನ್ ಮತ್ತು ಪ್ಲಾನ್ ಎಷ್ಟು ಎಂಬುದನ್ನು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, 2001–02 ಇದಕ್ಕೆ ಹೋಲಿಸಿದರೆ 2002–03ರಲ್ಲಿ ಹಣ ಏಕೆ ಕಡಿಮೆಯಾಗಿದೆ ಎಂದು ತಾವು ಕೇಳುತ್ತಿದ್ದೀರಿ. ಅದು ಸರಿಯಾದ ಪ್ರಶ್ನೆ. ಇದಕ್ಕೆ ಮುಖ್ಯವಾದ ಕಾರಣ ಎರಡು ಇದೆ. ಒಂದನೆಯದು, ಐದು ವರ್ಷ ಮುಗಿದ ನಂತರ ಯಾವುದೇ ಕಾರ್ಯಕ್ರಮದಲ್ಲಿರತಕ್ಕ ಸಂಬಳಕ್ಕೆ ಬೇಕಾಗುವಂಥ ಹಣ. ಅದನ್ನು ನಾವು ನಾನ್‌ಪ್ಲಾನ್ ಎಂದೇನು ಕರೆಯುತ್ತೇವೆ, ಅದು ಪ್ಲಾನ್‌ನಿಂದ ನಾನ್‌ಪ್ಲಾನ್‌ಗೆ ಹೋಗುತ್ತದೆ. ಇದು 32 ಕೋಟಿ ರೂಪಾಯಿಗಳನ್ನು ತಮ್ಮ ಜಿಲ್ಲೆಗೆ ಪ್ಲಾನ್‌ಗೆ 2001–02ರಲ್ಲಿ ಇದ್ದದ್ದು. 23 ಕೋಟಿ ರೂಪಾಯಿ ಹೇಗೆ ಇಳಿಯಿತು? ಅದಕ್ಕೆ ಮುಖ್ಯವಾದ ಕಾರಣವೆಂದರೆ ಈ ನಾನ್‌ಪ್ಲಾನ್ ಅಂಶ ಏನು ಇದೆ, ಅದು 50 ವರ್ಷದ ಕೊನೆಯಲ್ಲಿ ನಾನ್ ಪ್ಲಾನ್‌ಗೆ ಹೋಗುತ್ತದೆ. ಮತ್ತೆ ಇನ್ನೊಂದು ಪ್ರಶ್ನೆಯನ್ನು ತಾವು ಕೇಳಬಹುದು. ನಾನ್ ಪ್ಲಾನ್, ಪ್ಲಾನ್ ಜೊತೆಗೆ ತೆಗೆದುಕೊಂಡರೂ ಕೂಡ ಕಡಿಮೆಯಾಗಿದೆ ಎಂದು. ಅದು ಮೂಲ ಭೂತವಾದಂಥ ಪ್ರಶ್ನೆ. ಅದಕ್ಕೆ ಇನ್ನೊಂದು ಕಾರಣ, ಆದೇನೆಂದರೆ ಜಿಲ್ಲಾ ಮಟ್ಟದಲ್ಲಿ ಆಗುವ ಕಾರ್ಯಕ್ರಮಗಳು, ಯಾವ ಜಿಲ್ಲಾ ಮಟ್ಟದಲ್ಲಿ ನ್ಯಾಯವಾಗಿ ಆಗುತ್ತದೋ ಅಂಥದ್ದು ತಾವು ಸ್ಟೇಟ್ ಸೆಕ್ಟಾರ್‌ನಲ್ಲಿ ಮಾಡಿದರೆ ಆಗ ಜಿಲ್ಲಾ ಸೆಕ್ಟಾರ್ ಯಾವ ಪ್ರಮಾಣದಲ್ಲಿ ಬೆಳೆಯಬೇಕಿತ್ತೋ ಇಡೀ ಪ್ಲಾನ್‌ಗೆ ಹೋಲಿಸಿದರೆ ಅದು ಬೆಳೆಯುತ್ತದೆ. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಹೋದ ವರ್ಷವೇ ತಂದಿದ್ದೇನೆ. ಅದಕ್ಕೋಸ್ಕರ ಈ ವರ್ಷ 2003–04ರಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಣೆಯಾಗಿತ್ತು ಕೊಡಗಿನಲ್ಲಿ ಕೂಡ ಅದು ಜಿಲ್ಲಾ ಸೆಕ್ಟಾರ್‌ನಲ್ಲಿ ಬೆಳೆಯುತ್ತಿಲ್ಲ. ಏಕೆಂದರೆ ಅಲ್ಲಿ ಆಗುವ ಕಾರ್ಯಕ್ರಮಗಳು, ಉದಾಹರಣೆಗಾಗಿ ನಿಮ್ಮ ಬ್ಲಾಕ್ ಬೋರ್ಡ್ ಕಾರ್ಯಕ್ರಮ 137 ಕೋಟಿ ರೂಪಾಯಿ ಕಾರ್ಯಕ್ರಮ. ಅದು ಜಿಲ್ಲಾ ಸೆಕ್ಟಾರ್‌ನಲ್ಲಿ ಇದ್ದುದ್ದನ್ನು ಸ್ಟೇಟ್ ಸೆಕ್ಟಾರ್‌ಗೆ ತೆಗೆದುಕೊಂಡು ಹೋದಿರಿ. ಈ ರೀತಿಯಾದರೆ ಜಿಲ್ಲಾ ಸೆಕ್ಟಾರ್ ಹೇಗೆ ಬೆಳೆಯಬೇಕು? ಇದು ಗಂಭೀರವಾದ ಪ್ರಶ್ನೆ ಇದೆ. ಅದಕ್ಕೋಸ್ಕರ ನಾವು ರ್ಯಾಷನಲೈಜೇಷನ್ ಆಫ್ ಸ್ಕೀಮ್ಸ್ ಮತ್ತೆ ಅಕ್ಟಿವಿಟಿ ಮ್ಯಾಪಿಂಗ್ ಏನು ಸಂಪುಟದಲ್ಲಿ ಅದರ ಬಗ್ಗೆ ಒಪ್ಪಿಕೊಂಡಿದ್ದಾರೆ, ಅದನ್ನು ಮಾಡಿ ಯಾವ ಕಾರ್ಯಕ್ರಮ ಯಾವ ಮಟ್ಟಕ್ಕೆ ಯಾವ ಲೆವೆಲ್‌ಗೆ ಆಗಬೇಕು, ಅದನ್ನು ಮಾಡಿದರೆ ಈ ರೀತಿ ವ್ಯತ್ಯಾಸ ಕಂಡು ಬರಲಿಕ್ಕಿಲ್ಲ. ಆದರೆ ಅದಕ್ಕೆ ಸ್ವಲ್ಪ ವೇಳೆ ಬೇಕಾಗುತ್ತದೆ. ಮೂರು ತಿಂಗಳೋ ಆರು ತಿಂಗಳೋ ಬೇಕಾಗುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೇ, 2003–04ಕ್ಕೆ ಎಷ್ಟು ಹಣವನ್ನು ಬಜೆಟ್‌ನಲ್ಲಿ ಮುಡಿಪಾಗಿಟ್ಟಿದ್ದೀರಿ ಎಂದು ನಾನು ಈಗ ಕೇಳಿದೆ. ಅದಕ್ಕೆ ತಾವು ಉತ್ತರವನ್ನು ಕೊಡಲಿಲ್ಲ. ಆದರೆ ಪ್ಲಾನ್ ಮತ್ತು ನಾನ್ ಪ್ಲಾನ್ ಬಗ್ಗೆ ಕೇಳಿದೆ, ಎಷ್ಟು ಇಟ್ಟಿದ್ದೀರಿ ಎಂದು. ನನಗೆ ತಿಳಿದ ಹಾಗೆ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ 46 ಕೋಟಿ ರೂ. ಚಿಲ್ಲರೆ ಇಟ್ಟಿದ್ದೀರಿ. ಅದೇ ರೀತಿ

ಸುಮಾರು ಪ್ಲಾನ್‌ನಲ್ಲಿ 23 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಸುಮಾರು 69 ಕೋಟಿ ರೂ. ಈ ವರ್ಷ ಇಟ್ಟಿದ್ದೀರಿ. ವರ್ಷ ವರ್ಷ ಈ ಮೊತ್ತವನ್ನು ಏತಕ್ಕಾಗಿ ಕಡಿಮೆ ಮಾಡುತ್ತಿದ್ದೀರಿ. ಮತ್ತೆ ಈ ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡುವಂಥ ಹಣ....

Mr. Speaker:- You must get a brief answer. Come on tell me ಅದನ್ನು ಡೀಟೈಲ್ ಆಗಿ ಮಾತನಾಡಿದರೆ ಅರ್ಥ ಏನು ಇದೆ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಬೇರೆಯವರ ಹಾಗೆ ಭಾಷಣ ಮಾಡುವುದಿಲ್ಲ. ನೇರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು:– ತಾವೇ ಹೇಳಿ ಪ್ಲಾನ್ ವಿಷಯವನ್ನು ಪ್ರಶ್ನೋತ್ತರ ವೇಳೆಯಲ್ಲಿ ತೆಗೆದು ಕೊಳ್ಳಬಹುದೇ?

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ಇಲ್ಲಿ ಏನಾಗಿದೆ, ಪ್ಲಾನ್‌ನಲ್ಲಿ ಬರುವಂಥ ಹಣ ಕೇವಲ 23 ಕೋಟಿ ರೂ. ನಾನ್ ಪ್ಲಾನ್‌ನಲ್ಲಿ 46 ಕೋಟಿ ರೂ. ಬರುತ್ತಿದೆ. ಈ ಎಸ್ಟಾಬ್ಲಿಷ್‌ಮೆಂಟ್ ಕಾಸ್ಟ್‌ನ್ನು ಕಡಿಮೆ ಮಾಡುತ್ತೀರಾ? ಅದನ್ನೇನಾದರೂ ಕಡಿಮೆ ಮಾಡುವುದಕ್ಕೆ ತಮ್ಮಲ್ಲೇನಾದರೂ ಕ್ರಮ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ? ಇದು ನನ್ನ ಮುಖ್ಯ ಉದ್ದೇಶ. ತಾಲ್ಲೂಕು ಪಂಚಾಯಿತಿ ಒಂದಕ್ಕೆ ನಮ್ಮ ಜಿಲ್ಲೆಯಲ್ಲಿ 22 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಯಾವುದಕ್ಕೆ ಎಂದರೆ ಆಡಳಿತ ವೆಚ್ಚ. ಆದರೆ ತಾಲ್ಲೂಕು ಪಂಚಾಯಿತಿಗೆ ಕೊಡುವುದು ಕೇವಲ 5 ಕೋಟಿ ರೂ. ಚಿಲ್ಲರೆ. ಈ ತಾಲ್ಲೂಕು ಪಂಚಾಯಿತಿಯನ್ನು ಅಬಾಲಿಷ್ ಮಾಡುತ್ತೀರಾ? ಈ ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡುವುದನ್ನು ಕಡಿತಗೊಳಿಸುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, ನಾನ್ ಪ್ಲಾನ್‌ನಲ್ಲಿ ಅದು ಯಾವಾಗಲೂ ಜಾಸ್ತಿಯಾಗುತ್ತಾ ಹೋಗುತ್ತದೆ. ಪ್ಲಾನ್‌ಗಿಂತ. ಉದಾಹರಣೆಗಾಗಿ ತಮ್ಮ ಕೊಡಗು ಜಿಲ್ಲೆಯಲ್ಲಿ 2003–04 ಈ ವರ್ಷದ ಬಜೆಟ್‌ನಲ್ಲಿ 23 ಕೋಟಿ ರೂ. ಪ್ಲಾನ್ ಇದ್ದರೆ 46 ಕೋಟಿ ರೂ. ನಾನ್ ಪ್ಲಾನ್‌ನಲ್ಲಿದೆ. ಅಂದರೆ ಎರಡರಷ್ಟು. ಅದಕ್ಕೆ ನಾನು ಆಗಲೇ ಕಾರಣವನ್ನು ಹೇಳಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಆಡಳಿತ ವೆಚ್ಚವನ್ನು ಕಡಿಮೆ ಮಾಡುತ್ತೀರಾ? ಅದಕ್ಕೇನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು:– ನಾನ್ ಪ್ಲಾನ್‌ನದ್ದು ಕಡಿಮೆ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, ನಾನ್ ಪ್ಲಾನ್‌ನಲ್ಲಿ ಕಡಿಮೆ ಮಾಡುವ ಪ್ರಶ್ನೆಯೇ ಬರುವುದಿಲ್ಲ, ಏಕೆಂದರೆ ನಾನ್ ಪ್ಲಾನ್‌ನಲ್ಲಿ ಕಡಿಮೆ ಮಾಡಲಿಕ್ಕೆ ಹೋದರೆ ಸಂಬಳಗಳನ್ನು ನಿಲ್ಲಿಸಬೇಕಾಗುತ್ತದೆ. ನಾನ್ ಪ್ಲಾನ್ ಎಂದರೆ ಏನು? ಹೋದ ಪಂಚವಾರ್ಷಿಕ ಯೋಜನೆಯಲ್ಲಿ ಏನು ಹೊಸ ಕಾರ್ಯಕ್ರಮಗಳನ್ನು ನಾವು ಅನುಷ್ಠಾನಕ್ಕೆ ತಂದಿದ್ದೇವೆ.

ಅವಾಗ ಸಂಬಳ ಕೂಡ ಪ್ಲಾನ್ ಇದ್ದುದ್ದನ್ನು ಐದು ವರ್ಷವಾದ ಮೇಲೆ ನಾನ್ ಪ್ಲಾನ್‌ಗೆ ತಂದಿದ್ದೇವೆ. The truth is ಟೂ ಥರ್ಡ್ ಸಂಬಳಕ್ಕೇ ಹೋಗುತ್ತದೆ.

ಅಧ್ಯಕ್ಷರು:– ಪಂಚಾಯತ್ ರಾಜ್‌ಗೆ ಕೆಲವು ಅಧಿಕಾರಗಳನ್ನು ಏಕೆ ಮೊಟಕುಗೊಳಿಸುತ್ತಿದ್ದೀರಿ ಏಕೆ? ಅದನ್ನು ಪುನರ್ ವಿಮರ್ಶೆ ಮಾಡುತ್ತೀರಾ ಎಂದು ಕೇಳಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ:– ನಾವು ಇದನ್ನು ಸಂಪೂರ್ಣವಾಗಿ ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಈ ಪ್ಲಾನ್, ನಾನ್ ಪ್ಲಾನ್, ಡಿಸ್ಟ್ರಿಕ್ಟ್ ಸೆಕ್ಟಾರ್ ಏನು, ಸ್ಟೇಟ್ ಸೆಕ್ಟಾರ್ ಏನು

ಇದೆ, ಅದು ಮೂಲಭೂತವಾಗಿ ಸಂಪೂರ್ಣ ವಿಮರ್ಶೆ ಮಾಡಬೇಕಾಗುತ್ತದೆ. ಅವರ ಪ್ರಶ್ನೆ ಬಂದಾಗ ಬೇಕಾದರೆ ಇನ್ನೂ ಡೀಟೇಲ್ ಆಗಿ ನಾನು ಹೇಳುತ್ತೇನೆ.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ನೀಡುವ ಬಗ್ಗೆ

379(3631): ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಆಡಳಿತ ವಿಕೇಂದ್ರೀಕರಣಕ್ಕೆ ಬದ್ದವಾಗಿರುವ ಈ ಸರ್ಕಾರ ಈಗಾಗಲೇ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನ, ಕಾನೂನು ಹಾಗೂ ನಿಯಮಗಳ ಅಡಿಯಲ್ಲಿ ಕೊಡಲಾದ ಕೆಲವು ಅಧಿಕಾರಗಳನ್ನು ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ರೀತಿಯ ಮೊಟಕುಗೊಳಿಸಿದ ಅಧಿಕಾರಗಳನ್ನು ಪುನಃ ಪಂಚಾಯತ್ ರಾಜ್ ವ್ಯವಸ್ಥೆಗೆ ವರ್ಗಾಯಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ:

ಇ) ಮೊಟಕಾಗಿರುವ ಅಧಿಕಾರಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ವರ್ಗಾಯಿಸಲು ಬೇಕಾದ ಕಾಲಮಿತಿ ಎಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ ಸಂವಿಧಾನದ 11ನೇ ಪರಿಚ್ಛೆದದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸ ಲಾಗಿದ್ದರೂ ಕೆಲವೊಂದು ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳೇ ಅನುಷ್ಠಾನಗೊಳಿಸುತ್ತಿದೆ.

ಆ) ಈಗಾಗಲೇ ಸರ್ಕಾರವು ಹಲವಾರು ಯೋಜನೆಗಳನ್ನು ಸರಳೀಕರಿಸಲು ಕ್ರಮ ಕೈಗೊಂಡಿದೆ ಹಾಗೂ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಯಹಂಚಿಕೆ ನಕ್ಷೆಯನ್ನು ತಯಾರಿಸಲಾಗಿದೆ.

ಇ) ಈ ವಿಷಯವು ನಿರಂತರ ಪ್ರಕ್ರಿಯೆ ಆಗಿದ್ದು ಇದನ್ನು ವರ್ಷಾಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಶೆಡ್ಯೂಲ್ 3ರ ಪ್ರಕಾರ ಜನರಿಗೆ ಬಹಳಷ್ಟು ಅನುಕೂಲ ಇರುವಂತಹ ಶಿಕ್ಷಣ ಆಗಲಿ, ಅನಿಮಲ್ ಹಸ್ಬೆಂಡರಿ ಆಗಲಿ, ಫುಡ್ ಡಿಸ್ಟ್ರಿಬ್ಯೂಷನ್ ಆಗಲೀ ಈ ಎಲ್ಲಾ ಕಾರ್ಯಗಳನ್ನು ನೀವು ಇಲಾಖೆಯ ಮುಖಾಂತರ ನಡೆಸುತ್ತಿದ್ದೀರಿ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಇದು ಬರಲೇ ಇಲ್ಲ. ಅವನ್ನು ಯಾವಾಗ ಕೊಡುತ್ತೀರಿ? ನಮ್ಮ ದುರ್ದೈವ ಎಂದರೆ ಈ ಡಿಸೆಂಟ್ರಲೈಸೇಷನ್ ಬಗ್ಗೆ ಬಹಳಷ್ಟು ಬದ್ಧತೆ ಇರುವಂತಹ ಮಂತ್ರಿಗಳು ಇದ್ದಾರೆ, ಇಲಾಖೆಯ ಶಿಕ್ಷಣ ಸಚಿವರು ಇದ್ದಾರೆ, ಆದರೂ ಸಹಿತ ಅಧಿಕಾರ ಮಾತ್ರ ಬೆಂಗಳೂರಿನಲ್ಲಿಯೇ ಇದೆ. ಜಿಲ್ಲೆಗೆ ಹೋಗಲೇ ಇಲ್ಲ. ಅದಕ್ಕೆ ಯಾವಾಗ ಅಧಿಕಾರವನ್ನು ಕೊಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ:– ಯಾವ ಜಿಲ್ಲಾ ಮಟ್ಟಕ್ಕೆ ಕಾರ್ಯಕ್ರಮ ಆಗಬೇಕಾಗಿತ್ತು, ಅದು ಸ್ಟೇಟ್ ಮಟ್ಟಕ್ಕೆ ಆಗುತ್ತಿದೆ. ಅದರ ಒಂದು ದೊಡ್ಡ ಪಟ್ಟಿನೇ ಇದೆ. ಈಗ ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ, ಸಂವಿಧಾನದ 9ನೇ ಆಕ್ಟ್ ಪ್ರಕಾರ ಮತ್ತು ನಮ್ಮ 73ನೇ ತಿದ್ದುಪಡಿ ಪ್ರಕಾರ